# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್ಸಿ ನಂ. 36/2014**

**ದೋ.ಸಾ. : 38 ಪ್ರಾ.ಸಾ. : 38**

ಸಾಕ್ಷಿಯ ಹೆಸರು : ಡಾ. ವಿ.ಟಿ.ಭಾನು
ತಂದೆಯ ಹೆಸರು : ವೆಂಕಟಸ್ವಾಮಿ ತಮ್ಮಿ ಶೆಟ್ಟಿ
ವಯಸ್ಸು : 65 ವರ್ಷ
ಕೆಲಸ : ನಿವೃತ್ತ ಅಧೀಕ್ಷಕ ವೈದ್ಯಾಧಿಕಾರಿಗಳು
ವಾಸ : ಅಂಬಿಕಾನಗರ, ದಾಂಡೇಲಿ

**ದಿನಾಂಕಃ 09-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2014 ನೇ ಇಸವಿಯಲ್ಲಿ ನಾನು ಕದ್ರಾದ ಕೆ.ಪಿ.ಸಿ. ಆಸ್ಪತ್ರೆಯಲ್ಲಿ ಡೆಪ್ಯೂಟಿ ಮೆಡಿಕಲ್ ಸೂಪರಿಂಟೆಂಡೆಂಟ್ ಆಫೀಸರ್ ಆಗಿ ಕೆಲಸ ನಿರ್ವಹಿಸಿರುತ್ತೇನೆ. ನಾನು ಎಂ.ಬಿ.ಬಿ.ಎಸ್. ಹಾಗೂ ಜನರಲ್ ಸರ್ಜರಿಯಲ್ಲಿ ಎಂ.ಎಸ್. ಪದವಿ ಮಾಡಿರುತ್ತೇನೆ.

2. ದಿಃ14-02-2014 ರಂದು ರಾತ್ರಿ ನಾನು ಕೆ.ಪಿ.ಸಿ. ವಸತಿಗೃಹದಲ್ಲಿದ್ದಾಗ ರಾತ್ರಿ 12.15 ಗಂಟೆಗೆ ಕೆ.ಪಿ.ಸಿ. ಆಸ್ಪತ್ರೆಯ ಸಿಬ್ಬಂದಿಗಳು ನನಗೆ ಕರೆ ಮಾಡಿ, ಕದ್ರಾ ಪೊಲೀಸರು ಒಬ್ಬ ಮಹಿಳೆಯನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದು, ತುರ್ತು ಚಿಕಿತ್ಸೆ ನೀಡಲು ಬರುವಂತೆ ತಿಳಿಸಿರುತ್ತಾರೆ. ಅದರಂತೆ, ನಾನು ಕೆ.ಪಿ.ಸಿ. ಆಸ್ಪತ್ರೆಗೆ ಬಂದು ನೋಡಿದಾಗ ಪೊಲೀಸರು ಕರೆದುಕೊಂಡು ಬಂದಿದ್ದ ಮಹಿಳೆಯ ಹೆಸರು ಜಾನಕಿ ವೇಲು ಇಲ್ಲನ್‌ಗುಡಿ, ವಯಸ್ಸು 28, ಸಾಃ ರಾಜೀವನಗರ ಆಗಿದ್ದು, ಆಕೆಯನ್ನು ನಾನು ಪರೀಕ್ಷಿಸಿದಾಗ ಆಕೆಯ ತಲೆಗೆ ಗಾಯವಾಗಿ ರಕ್ತ ಬಂದಿತ್ತು ಹಾಗೂ ಆಕೆಯ ಎಡ ಮುಂಗೈ ತುಂಡಾಗಿದ್ದು, ಕೈ ಇರಲಿಲ್ಲ ಹಾಗೂ ಬಹಳ ರಕ್ತಸ್ರಾವವಾಗುತ್ತಿತ್ತು. ಸದರಿ ಮಹಿಳೆಯು ಅರೆ ಪ್ರಜ್ಞಾವಸ್ಥೆಯಲ್ಲಿದ್ದಳು ಹಾಗೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಗಾಯಾಳು ಗಂಭೀರ ಸ್ಥಿತಿಯಲ್ಲಿದ್ದಿದ್ದರಿಂದ ನಾನು ಆಕೆಯ ಗಾಯಗಳಿಗೆ ಕ್ಲೀನಿಂಗ್ ಮತ್ತು ಡ್ರೆಸ್ಸಿಂಗ್ ಮಾಡಿ ಗಟ್ಟಿಯಾಗಿ ಬ್ಯಾಂಡೇಜ್ ಮಾಡಿರುತ್ತೇನೆ ಹಾಗೂ ಟಿ.ಟಿ.

ಇಂಜೆಕ್ಷನ್ ನೀಡಿರುತ್ತೇನೆ. ಆನಂತರ ನಾನು ಪೊಲೀಸರಿಗೆ ಸದರಿ ಮಹಿಳೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಸೂಚಿಸಿರುತ್ತೇನೆ.

3. ನಂತರ ಪೊಲೀಸರು 15-05-2014 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿದ್ದು, ಅದರಂತೆ ನಾನು ನಮ್ಮ ಆಸ್ಪತ್ರೆಯ ದಾಖಲೆಯನ್ನು ಪರಿಶೀಲಿಸಿ ಈ ಪ್ರಕರಣದ ಗಾಯಾಳು ಜಾನಕಿಯ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತನಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.85 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.85(ಎ) ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.86 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.86(ಎ) ಎಂದು ಗುರುತಿಸಲಾಯಿತು. ಪೊಲೀಸರು ನೀಡಿದ ಕೋರಿಕೆ ಪತ್ರದಲ್ಲಿ ನಾನು ಸಹಿ ಮಾಡಿದ್ದು, ಇಸವಿಯನ್ನು 2014 ಎಂದು ನಮೂದಿಸುವ ಬದಲು ಕಣ್ತಪ್ಪಿನಿಂದ 2015 ಎಂದು ನಮೂದಿಸಿರುತ್ತೇನೆ. ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯವು ಎಂ.ಓ-26 ನಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀ ಸವಾಲುಃ ಶ್ರೀ ಎ.ಎ.ಎ. ವಕೀಲರಿಂದ ಆರೋಪಿಗಳ ಪರವಾಗಿಃ</u>**

4. ಎಂ.ಓ.26 ನಿಂದ ಹೊಡೆದರೆ ನಿ.ಪಿ.86 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆಗಳು ಇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ